ಚಾರ್ಮಾಡಿ ಕ್ಷೇತ್ರದಲ್ಲಿ ದಾಸ್ತಾನು ಕೊರಡಿ ಮತ್ತು ಪಂಪ್‌ಹೌಸ್, ಬೇಲಿ ನಿರ್ಮಾಣ ಮಾಡಲಾಗುತ್ತಿದೆ

ಮದ್ದಡ್ಕ ಕ್ಷೇತ್ರ ಮತ್ತು ಬೆಳ್ತಂಗಡಿ ಕಛೇರಿ ನರ್ಸರಿಯಲ್ಲಿ ಮೂಲಭೂತ ಸೌಕರ್ಯಗಳಾದ ಪಾಲಿಹೌಸ್, ಕೊಳವೆಬಾವಿ, ತಂತಿ ಬೇಲಿ, ಪಾಟಿಂಗ್ ಶೆಡ್ ನಿರ್ಮಾಣ ಮಾಡಲಾಗುತ್ತಿದೆ

138 (436) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಹೊಸ ಕೃಷಿ ನೀತಿಯಿಂದ ರೈತರ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಿಕೊಳ್ಳಲು ಸರಕಾರ ರೂಪಿಸಿ ಜಾರಿಗೊಳಿಸಿದ ಯೋಜನೆಗಳು ಯಾವುವು ,

ಆ) ಹೊಸ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಕರ್ನಾಟಕ ಕೃಷಿ ಕ್ಷೇತ್ರವನ್ನು ಗಣನೀಯ ಪ್ರಮಾಣದಲ್ಲಿ ಮುನ್ನಡೆಸಲು ಸರ್ಕಾರದ ಸಮಯ ನಿರ್ಬಂಧಿತ ಕಾರ್ಯಕ್ರಮಗಳೇನು ,

ಇ) ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸೌಲಭ್ಯ ನೀಡುವ ಕುರಿತಾದ ಸರ್ಕಾರದ ನಿಲುವುಗಳೇನು ,

ಈ) ಕೃಷಿ ತಂತ್ರಜ್ಞಾನ ಪಾರ್ಕ್‌ಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಪ್ರಾರಂಭಿಸುವ ಸರ್ಕಾರದ ಯೋಜನೆಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ರಾಜ್ಯದ ಹೊಸ ಕೃಷಿ ನೀತಿಯಲ್ಲಿ ರೈತರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಇವುಗಳನ್ನು ಮುಂದಿನ ಆರ್ಥಿಕ ವರ್ಷದಿಂದ ಜಾರಿಗೆತರಲು ಉದ್ದೇಶಿಸಲಾಗಿದೆ

ಆ) ಹೊಸ ಕೃಷಿ ಸಂಶೋಧನಾ ಫಲವನ್ನು ಆಗಿಂದ್ದಾಗ್ಗೆ ರೈತಾಪಿ ವರ್ಗಕ್ಕೆ ತಲುಪಿಸಲು ಕೃಷಿ ನೀತಿಯಲ್ಲಿ ಒತ್ತು ನೀಡಲಾಗಿದೆ

ಇ) ರೈತರಿಗೆ ಶೇ 4% ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ಈಗಾಗಲೇ ಸಾಲ ನೀಡಲಾಗುತ್ತಿದೆ

ಈ) ರಾಜ್ಯ ನೂತನ ಕೃಷಿ ನೀತಿಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಒಂದೊಂದು ಕೃಷಿ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ